ದಿನಾಂಕ : 25 ನೇ ಮೇ 2023 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು : ಆರೋಪಿ ಪರ ವಕೀಲರಿಂದ.

ಆರೋಪಿಯವರ ಮನೆ ಎಲ್ಲಿದೆ ಎಂದು ಗೊತ್ತಿಲ್ಲ, ಅವರ ಅಂಗಡಿ ಗೋಣಿಕೊಪ್ಪದಲ್ಲಿ ಇದೆ ಎನ್ನುತ್ತಾರೆ. ಸದರಿ ಅಂಗಡಿ ಹೆಸರು ಗೊತ್ತಿಲ್ಲ ಅದು 2018 ರಿಂದ ಮುಚ್ಚಲಾಗಿದೆ. ನಾವು ಪ್ರತಿ ವರ್ಷ 500 ಚೀಲ ಕಾಫಿ ಹಾಗೂ ಮೆಣಸು 10 ರಿಂದ 20 ಕ್ವಿಂಟಾಲ ಬೆಳೆಯುತ್ತೇನೆ. ಸುಮಾರು 8-10 ವರ್ಷಗಳಿಂದ ಆರೋಪಿಗೆ ನಾವು ಕಾಫಿ ಮತ್ತು ಮೆಣಸು ಮಾರಾಟ ಮಾಡುತ್ತಿದ್ದೆವು. ಆರೋಪಿಯೇ ನಮ್ಮ ಮನೆಗೆ ಬಂದು ಮೆಣಸು ಹಾಗೂ ಕಾಫಿಯನ್ನು ಲೋಡ್ ಮಾಡಿಕೊಂಡು ಹೋಗುತ್ತಿದ್ದರು. 2017 ರಲ್ಲಿ ಅದೇ ವರ್ಷದ ಕಾಫಿಯನ್ನು ಮಾರಾಟ ಮಾಡಿರುತ್ತೇನೆ. ಡಿಸೆಂಬರ್ ನಿಂದ ಜನವರಿ ಕೊನೆಗೆ ಕಾಫಿ ಕೊಯ್ಲು ಮಾಡಿದ್ದೇನೆ. ಸುಮಾರು 10 ಎಕರೆ ಕಾಫಿ ತೋಟ ಇದೆ ಎನ್ನುತ್ತಾರೆ. ಸದರಿ ಕಾಫಿ ತೋಟದ ಬಗ್ಗೆ ದಾವೆ ಇದೆ ಎಂದರೆ ಸರಿ. ಸದರಿ ದಾವೆಯಲ್ಲಿ ತೋಟಕ್ಕೆ ಯಾರೂ ಹೋಗಬಾರದು ಎಂದು ನಿರ್ಬಂಧಕಾಜ್ಞೆ ಆದೇಶ ಇದೆ ಎಂದರೆ ಸರಿಯಲ್ಲ.

2017 ರಲ್ಲಿ ಕಾಫಿ ಒಣಗಿದ ನಂತರ 412 ಚೀಲ ಕಾಫಿಯನ್ನು ಮಾರಾಟ ಮಾಡಿರುತ್ತೇನೆ. ಸ್ವಲ್ಪ ಕಾಫಿಯನ್ನು ಮನೆಗೆ ಇಟ್ಟುಕೊಂಡಿರುತ್ತೇನೆ. ಒಂದು ಚೀಲಕ್ಕೆ ರೂ 3 ಸಾವಿರ ಬೆಲೆ ಇತ್ತು. 2017 ರಲ್ಲಿ ಆರೋಪಿ ಕಾಫಿ ಖರೀದಿಸಿದಾಗ ತನ್ನ ಬಳಿ 2 ವರ್ಷ ಕಾಫಿಯನ್ನು ಡೆಪಾಜಿಟ್ ಇಟ್ಟರೆ 1 ಚೀಲ ಕಾಫಿಗೆ 3 ಸಾವಿರದ ಜೊತೆಗೆ 500 ರೂ ಹೆಚ್ಚು ಬೆಲೆ ಕೊಡುವುದಾಗಿ ತಿಳಿಸಿದ್ದರು. ಅದರಂತೆ ನಾನು ಒಪ್ಪಿ ಕಾಫಿ ಹಾಗೂ ಮೆಣಸನ್ನು ಮಾರಾಟ ಮಾಡಿರುತ್ತೇನೆ. 880 ಕೆ ಜಿ ಮೆಣಸು ಮಾರಾಟ ಮಾಡಿರುತ್ತೇನೆ. ಮೆಣಸಿಗೆ ಪ್ರತಿ ಕೆ ಜಿ ಗೆ ರೂ 300 ಇತ್ತು. ಆರೋಪಿ ಸದರಿ ಮೆಣಸನ್ನು ಡೆಪಾಜಿಟ್ ಇಟ್ಟರೆ 1 ಕೆ ಜಿ ಮೆಣಸಿಗೆ 300 ರೂ ಜೊತೆಗೆ 50 ರೂ ಹೆಚ್ಚು ಬೆಲೆ ಕೊಡುವುದಾಗಿ ತಿಳಿಸಿದ್ದರು. ಈ ಬಗ್ಗೆ ನಮ್ಮ ನಡುವೆ ಯಾವುದೆ ಲಿಖಿತ ತಕರಾರು ಆಗಿರುವುದಿಲ್ಲ, ಮೌಖಿಕವಾಗಿ ಒಪ್ಪಂದ ಮಾಡಿಕೊಂಡಿರುತ್ತೇವೆ. ಈ ಹಿಂದೆ ಕಾಫಿ ಹಾಗೂ ಮೆಣಸನ್ನು ಮಾರಾಟ ಮಾಡಿದಾಗ ಹಣವನ್ನು ನಗದಾಗಿ ನೀಡುತ್ತಿದ್ದರು. ದಿನಾಂಕ 15.03.2017 ರಂದು ಕಾಫಿ ಹಾಗೂ ಮೆಣಸು ಖರೀದಿಸಿ ಅದೇ ದಿನ ಆರೋಪಿ ನನಗೆ ಚೆಕ್ಕನ್ನು ಮಧ್ಯಾಹ್ನ 3.30 ರಿಂದ 4 ಗಂಟೆ ಸಮಯದಲ್ಲಿ ಅವರ

ಕಛೇರಿಯಲ್ಲಿ ನೀಡಿರುತ್ತಾರೆ. ಬೆಳಗ್ಗೆ ನಮ್ಮ ಗೊಡಾನ್ ನಿಂದ ಆರೋಪಿ ಕಾಫಿ ಹಾಗೂ ಮೆಣಸನ್ನು ತೆಗೆದುಕೊಂಡು ಹೋದರು. ಆರೋಪಿಯವರು ವಾಹನ ಹಾಗೂ 6 ಜನ ಕೆಲಸದವರನ್ನು ಕಾಫಿ ತೆಗೆದುಕೊಂಡು ಹೋಗಲು ಹಾಗೂ 4 ಜನರನ್ನು ಮೆಣಸು ತೆಗೆದುಕೊಂಡು ಹೋಗಲು ಆರೋಪಿ ಕರೆದುಕೊಂಡು ಬಂದಿರುತ್ತಾರೆ. ಆರೋಪಿಯೇ ಗೋಡಾನ್ ನಿಂದ ಕಾಫಿ ಹಾಗೂ ಮೆಣಸನ್ನು ಚೀಲದಲ್ಲಿ ತುಂಬಿಕೊಂಡು ತೆಗೆದುಕೊಂಡು ಹೋಗಿರುತ್ತಾರೆ. ಲಾರಿಯಲ್ಲಿ 2 ಬಾರಿ ಬಂದು ತಲಾ 206 ಕಾಫಿ ಚೀಲಗಳನ್ನು ತೆಗೆದುಕೊಂಡು ಹೋಗಿರುತ್ತಾರೆ.

ಆ ದಿನ ಆರೋಪಿ ಕಛೇರಿಯಲ್ಲಿ ಚೆಕ್ ಪಡೆಯುವಾಗ ನನ್ನ ಜೊತೆಗೆ ಬೋಪಣ್ಣ ಹಾಗೂ ಪರಮೇಶ್ವರ್ ಎಂಬುವವರು ಹಾಜರಿದ್ದರು. ಆ ದಿನ ಪರಮೇಶ್ವರ್ ಹಾಗೂ ಬೋಪಣ್ಣ ಕಾಫಿ ನೀಡಲು ಅಂಗಡಿಗೆ ಬಂದಿದ್ದರು. ಬೋಪಣ್ಣ ಹಾಗೂ ಪರಮೇಶ್ವರ್ ನನಗೆ ಮೊದಲಿನಿಂದ ಪರಿಚಯ ಹಾಗಾಗಿ ಅವರ ವಿಳಾಸ ಮೊದಲೇ ತಿಳಿದಿರುತ್ತದೆ. ನಾನು ಪ್ರತಿ ಬಾರಿ ಕಾಫಿ ಮಾರಾಟ ಮಾಡುವಾಗ ಬೋಪಣ್ಣ ಹಾಗೂ ಪರಮೇಶ್ವರ್ ರವರನ್ನು ಕರೆದುಕೊಂಡು ಹೋಗುತ್ತಿರಲಿಲ್ಲ. ಕೆಲವು ಬಾರಿ ನಾನು ಅಂಗಡಿಗೆ ಹೋದಾಗ ಅವರು ಸಹ ಅಂಗಡಿಯಲ್ಲಿ ಇರುತ್ತಿದ್ದರು ಎನ್ನುತ್ತಾರೆ. ಆರೋಪಿ ಬೋಪಣ್ಣ ಹಾಗೂ ಪರಮೇಶ್ವರ್ ನವರಿಗೆ ಚೆಕ್ ನೀಡಿದ್ದಾರೋ ಇಲ್ಲವೊ ನನಗೆ ಮಾಹಿತಿ ಇಲ್ಲ. ಆ ದಿನ ನನ್ನ ವ್ಯವಹಾರ ಹೆಚ್ಚಿನ ಹಣ ಆಗಿದ್ದ ಕಾರಣ ಬೋಪಣ್ಣ ಹಾಗೂ ಪರಮೇಶ್ವರ್ ರವರನ್ನು ಅಂಗಡಿಯಲ್ಲಿ ಇದ್ದು ಅವರನ್ನು ವ್ಯವಹಾರಕ್ಕೆ ಅಲ್ಲಿ ಕರೆಸಿರುತ್ತೇನೆ. ಅಂಗಡಿಯಲ್ಲಿ ಕೆಲಸದವರು ಇದ್ದರು ಅವರು ತಮ್ಮ ಕೆಲಸಗಳಲ್ಲಿ ಮಗ್ನರಾಗಿದ್ದರು. ಮೆಣಸನ್ನು ಕಛೇರಿ ಪಕ್ಕದ ಅಂಗಡಿಯಲ್ಲಿ ಇಳಿಸಿದರು , ಕಾಫಿಯನ್ನು ಎಲ್ಲಿಗೆ ತೆಗೆದುಕೊಂಡು ಹೋದರೋ ನನಗೆ ಗೊತ್ತಿಲ್ಲ. ಸದರಿ ಅಂಗಡಿಯಲ್ಲಿ ಒಂದೇ ಕೊಠಡಿ ಇದ್ದು ಒಂದು ಚೇಂಬರ್ ಮಾಡಿಕೊಂಡಿರುತ್ತಾರೆ.

ನನಗೆ ಆರೋಪಿ ಒಂದು ಚೆಕ್ ನೀಡಿರುತ್ತಾರೆ. ನಿಪಿ 1 ಚೆಕ್ಕನ್ನು ಆರೋಪಿ ನನ್ನಿಂದ ಕಾಫಿ ಹಾಗೂ ಮೆಣಸು ಖರೀದಿಸಿದ್ದಕ್ಕಾಗಿ ಭದ್ರತೆಗಾಗಿ ನೀಡಿದ ಚೆಕ್ ಎನ್ನುತ್ತಾರೆ. ನನಗೆ ಚೆಕ್ ನೀಡುವ ಮೊದಲೇ ಆರೋಪಿ ಬರವಣಿಗೆ ಮಾಡಿದ್ದರು. ನನ್ನ ಸಮಕ್ಷಮ ಸಹಿಯನ್ನು ಮಾಡಿದರು. ದಿನಾಂಕವನ್ನು 15.03.2019 ಎಂದು ನಮೂದಿಸಲಾಗಿತ್ತು. ಆರೋಪಿ ಹೊರಗಡೆ ಹೋಗಿ ತನ್ನ ವಾಹನದಲ್ಲಿ ಇದೆ ಎಂದು ಹೇಳಿ ಚೆಕ್ ಅನ್ನು ತೆಗೆದುಕೊಂಡು ಬಂದು ನೀಡಿದರು. ಒಂದು ನೊಟೀಸನ್ನು ಅಂಗಡಿಗೆ ವಿಳಾಸಕ್ಕೆ ಕಳುಹಿಸಿರುವುದಿಲ್ಲ ಏಕೆಂದರೆ ಅಂಗಡಿ ಮುಚ್ಚಿರುತ್ತಾರೆ. ಆದ

ಕಾರಣ ಆರೋಪಿ ವಿಳಾಸಕ್ಕೆ ನೋಟೀಸ್ ಕಳುಹಿಸಿರುತ್ತೇನೆ. ನಾನು ಹೇಳಿದಂತೆ ಆರೋಪಿಗೆ ನಾನು ಕಾಫಿ ಮತ್ತು ಮೆಣಸು ಮಾರಾಟ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಚೆಕ್ ನೀಡಿಲ್ಲ ಎಂದರೆ ಸರಿಯಲ್ಲ. ಆರೋಪಿ ವಿಳಾಸಕ್ಕೆ ನೋಟೀಸ್ ಕಳುಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ 2016 ರಿಂದ ಕೊಡಗಿನಲ್ಲಿ ವಾಸವಾಗಿಲ್ಲ ಎಂದರೆ ಸರಿಯಲ್ಲ. ಬೋಪಣ್ಣನವರಿಗೆ ಆರೋಪಿ ನೀಡಿದ ಚೆಕ್ ಅನ್ನು ನಾನು ದುರ್ಬಳಕೆ ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಹಾಗೂ ಆರೋಪಿ ನಡುವೆ ಯಾವುದೇ ವ್ಯವಹಾರ ಇಲ್ಲ ಎಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಸಮಯ ಕೇಳಲಾಗಿ ನೀಡಲಾಯಿತು.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)
ಓದಿ ಹೇಳಿ ಕೇಳಿಸಿ ಸರಿ ಇದೆ ಎಂದು ಒಪ್ಪಿದೆ.

(ಸಾಕ್ಷಿಯವರ ಸಹಿ)

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ.,ಪೊನ್ನಂಪೇಟೆ.